KACM210035012019

**O.S. No.680/2019. DW-1.**

ದಿನಾಂಕಃ**13.11.2024** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು**.**

<u>ಪಾಟೀ ಸವಾಲುಃ</u> ವಾದಿಯರ ಪರ ಶ್ರೀ ಎಸ್ ಎನ್ ಎ ವಕೀಲರಿಂದಃ-

ನಾನು ಎಸ್.ಎಸ್.ಎಲ್.ಸಿ ವರೆಗೂ ಓದಿರುತ್ತೇನೆ. ನನ್ನ ತಂದೆ 1987-88 ನೇ ಸಾಲಿನಲ್ಲಿ ಮೃತಪಟ್ಟಿರುತ್ತಾರೆ. ವಾದಿ ನನ್ನ ತಮ್ಮ, 1 ನೇ ಪ್ರತಿವಾದಿ ನನ್ನ ತಾಯಿ, 3 ನೇ ಪ್ರತಿವಾದಿ ನನ್ನ ತಮ್ಮ, 4 ರಿಂದ 7 ನೇ ಪ್ರತಿವಾದಿಗಳು ನನ್ನ ಸಹೋದರಿಯರು .

ನಮ್ಮ ಕುಟುಂಬದಲ್ಲಿ 1999 ರಲ್ಲಿ ಪಂಚಾಯಿತಿದಾರರ ಸಮಕ್ಷಮ ಮೌಖಿಕವಾಗಿ ವಿಭಾಗ ಮಾಡಿಕೊಂಡಿರುತ್ತೇವೆ ನಂತರ 2006 ರಲ್ಲಿ ಅದರಂತೆ ದಾಖಲೆ ಮಾಡಿಕೊಂಡಿರುತ್ತೇವೆ. 2006 ರಲ್ಲಿ ಆದ ವಿಭಾಗ ಪತ್ರದ ಮೂಲ ಪ್ರತಿ ನನ್ನ ಬಳಿ ಇದೆ. ಸಾಕ್ಷಿಯು ಅದನ್ನು ಕಡೂರಿನ ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿನ ದಾವೆಯಲ್ಲಿ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ.

ಈಗ ನೋಡುತ್ತಿರುವ ದಾಖಲೆಯು ಪಂಚಾಯಿತಿಯವರು ನಾವು ನೀಡಿದ ಪತ್ರಕ್ಕೆ ಕೊಟ್ಟಿರುವಂತಹ ಪ್ರತಿಯು ನಾನು ಹೇಳಿದಂತಹ 2006 ರ ವಿಭಾಗ ಪತ್ರದ ನಕಲು ಪ್ರತಿ ಎಂದರೆ ಸರಿ ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಒಪ್ಪಿಕೊಂಡಿರುತ್ತಾರೆ, ಆದ್ದರಿಂದ ಸದರಿ ದಾಖಲೆಗಳನ್ನು ಒಟ್ಟಾಗಿ ನಿಪಿ 9 ಎಂದು ಗುರುತಿಸಲಾಯಿತು.

ನಿಡಿ 11 ರ ಸ್ವತ್ತು ನಮ್ಮ ಹಿಡುವಳಿಯಲ್ಲಿ ಇದ್ದ ಜಮೀನಿನ ಪಕ್ಕದ ಸರ್ಕಾರಿ ಜಾಗವಾಗಿದ್ದು ಅದರ ಸ್ವಾಧೀನದಲ್ಲಿ ನಾನು ಇದ್ದೇನೆ. ನಿಡಿ 11 ರ ಸ್ವತ್ತಿನಲ್ಲಿ ನಾನು 1999 ರಿಂದ ಸ್ವಾಧೀನದಲ್ಲಿ ಇದ್ದೇನೆ. 1999 ರಿಂದ 2012 ರ ವರೆಗೂ ನಿಡಿ 11 ರ ಸ್ವತ್ತಿನ ಖಾತೆ ನನ್ನ ಹೆಸರಿಗೆ ಇರಲಿಲ್ಲ. ಯಾವ ಕಾರಣಕ್ಕಾಗಿ ನಿಡಿ 11 ರ ಸ್ವತ್ತಿನ ಖಾತೆ ನನ್ನ ಹೆಸರಿನಲ್ಲಿ ಇರಲಿಲ್ಲ ಎಂದು ನಾನು ಪಂಚಾಯಿತಿಯಲ್ಲಿ ಪ್ರಶ್ನಿಸಿರುವುದಿಲ್ಲ.

ಯಾವುದೇ ರೀತಿಯ ಆಸಿತಯ ಖಾತೆ ಮಾಡಬೇಕಾದರೆ ಷರಾ ಕಲಂ ನಲ್ಲಿ ಅದು ಹೇಗೆ ಖಾತೆ ಮಾಡಲಾಗಿದೆ ಎಂದು ನಮೂದು ಮಾಡಿರುತ್ತಾರೆ ಎಂದರೆ ಅದು ನನಗೆ ಗೊತ್ತಿಲ್ಲ.

ವಾದಿಯು ದಾವೆಯಲ್ಲಿ ದಾವಾ ಸ್ವತ್ತಿನ ಚೆಕ್ಕುಬಂಧಿ ಏನು ಹೇಳಿರುತ್ತಾರೆ ಎಂದು ನನಗೆ ಗೊತ್ತಿರುತ್ತದೆ, ಅದೇನೆಂದರೆ ಪೂರ್ವಕ್ಕೆ ಪುಟ್ಟಪ್ಪರವರ ಜಮೀನು ಮತ್ತು ರಸ್ತೆ, ಪಶ್ಚಿಮಕ್ಕೆ ಹಿಡುವಳಿ ಜಮೀನು, ಉತ್ತರಕ್ಕೆ ನನ್ನ ತಮ್ಮ ಬಸವರಾಜಪ್ಪ ರವರ ಜಮೀನು, ದಕ್ಷಿಣಕ್ಕೆ ಶಂಕರಪ್ಪ ರವರ ಜಮೀನು ಇದೆ ಎಂದು ಬರೆದಿರುತ್ತಾರೆ. ಈ ದಾವೆಯ ಬಗ್ಗೆ ನಾನು ನನ್ನ ವಕೀಲರಿಂದ ಕೇಳಿ ತಿಳಿದುಕೊಂಡು ತಕರಾರು ಸಲ್ಲಿಸಿರುತ್ತೇನೆ ಎಂದರೆ ಸರಿ.

ನಿಡಿ 11 ರ ಸ್ವತ್ತಿನ ಚೆಕ್ಕುಬಂಧಿಯನ್ನು ತೋರಿಸುವ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. 2006 ರಲ್ಲಿ ಕುಪ್ಪಾಳು ಗ್ರಾಮದ ಸರ್ವೆ ನಂಬರ್ 128/4, 128/3, 21, 110/2, 36, 37, 38 – ಈ ಸ್ವತ್ತುಗಳು ವಿಭಾಗವಾಗಿರುತ್ತದೆ. ಅದರ ಜೊತೆ ಹುಲ್ಲು ಹಿತ್ತಲು ಮತ್ತು ನಾಡ ಹೆಂಚಿನ ಮನೆ ಕೂಡ ವಿಭಾಗವಾಗಿರುತ್ತದೆ ಎಂದರೆ ಸರಿ. ನಮ್ಮ ಕುಟುಂಬದಲ್ಲಿ ನನ್ನ ತಂದೆಯು ಮೃತಪಟ್ಟ ನಂತರ ನಾನೇ ದೊಡ್ಡವನು ಎಂದರೆ ಸರಿ. ನಾನು ಹಿರಿಯ ಮಗನಾಗಿದ್ದ ಕಾರಣ ಮನೆಯ ಎಲ್ಲಾ ವ್ಯವಹಾರ ನಾನೇ ನೋಡಿಕೊಳ್ಳುತ್ತಿದ್ದೆ ಎಂದರೆ ಸರಿಯಲ್ಲ. ಸಾಕ್ಷಿಯು ನಾನು ಬೆರಳಚ್ಚುಗಾರನಾಗಿ ಮಡಿಕೇರಿಯ ಡಿ.ಸಿ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದ ಕಾರಣ ನನ್ನ ತಮ್ಮಂದಿರು ಮನೆಯ ವ್ಯವಹಾರ ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. ನಾನು ಡಿಸಿ ಕಛೇರಿಯಲ್ಲಿ ನೌಕರಿ ಮಾಡಿರುವುದರಿಂದ ನನಗೆ ಕಂದಾಯ ಇಲಾಖೆಯ ಸಿಬ್ಬಂದಿಗಳ ಪರಿಚಯ ಚೆನ್ನಾಗಿ ಇತ್ತು ಎಂದರೆ ಸರಿಯಲ್ಲ. ವಿಭಾಗವಾದ ಸಂದರ್ಭದಲ್ಲಿ ದಾವಾ ಸ್ವತ್ತಿನ ಖಾತೆ ನನ್ನ ಹೆಸರಿನಲ್ಲಿಯೇ ಇತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು

ಸ್ವಾಧೀನ ಮಾತ್ರ ಇತ್ತು ಎಂದು ನುಡಿಯುತ್ತಾರೆ. 2006 ರಲ್ಲಿ ವಿಭಾಗವಾಗುವಾಗ ಅಸೆಸ್ ಮೆಂಟ್ 532 ರ ಖಾತೆ ನನ್ನ ಹೆಸರಿನಲ್ಲಿಯೇ ಇದ್ದು ಆ ನಂತರ ಅದನ್ನು ಬದಲಾವಣೆ ಮಾಡಿಕೊಡುತ್ತೇನೆ ಎಂದು ನಾನು ವಾದಿ ಮತ್ತು ಇತರ ಪ್ರತಿವಾದಿಗಳಿಗೆ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಅಸೆಸ್ ಮೆಂಟ್ 532 ರಲ್ಲಿ ವಾದಿಗೆ ಭಾಗ ಕೊಡುತ್ತೇನೆ ಎಂದು ನಾನು ಪಂಚಾಯಿತಿದಾರರ ಮತ್ತು ಇತರ ಸಹೋದರರ ಮುಂದೆ ಒಪ್ಪಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆ ಅವಧಿಯಲ್ಲಿಯೇ ಹೈವೇ ಪ್ರಾಧಿಕಾರದವರು ಶಿವಮೊಗ್ಗ ರಸ್ತೆ ಮಾಡುವ ಸಲುವಾಗಿ ಸದರಿ ಸ್ವತ್ತನ್ನು ಜಪ್ತಿ ಮಾಡಿಕೊಂಡಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ಹಿಡುವಳಿ ಜಮೀನು ಆದ ಸರ್ವೆ ನಂ.128/7 ರ ಜಮೀನಿನಲ್ಲಿ 2 ಗುಂಟೆಯನ್ನು ಹಾಗೂ ಅದರ ಪಕ್ಕದಲ್ಲಿ ಇದ್ದ ನಾನು ಸ್ವಾಧೀನದಲ್ಲಿ ಇದ್ದ ಸರ್ಕಾರದ ಜಮೀನನ್ನು ಸಹ ಜಪ್ತಿ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

2006 ರಲ್ಲಿ ವಿಭಾಗವಾಗುವಂತಹ ಸಂದರ್ಭದಲ್ಲಿ ಕುಪ್ಪಾಳು ಗ್ರಾಮದ ಸರ್ವೆ ನಂಬರ್ 128/4, 128/3, 21, 110/2, 36, 37, 38 ಈ ಸ್ವತ್ತುಗಳು ಹಾಗೂ ಹುಲ್ಲು ಹಿತ್ತಲು ಮತ್ತು ನಾಡ ಹೆಂಚಿನ ಮನೆ ಹಾಗೂ ದಾವಾ ಸ್ವತ್ತು -ಇವೆಲ್ಲ ಸ್ವತ್ತುಗಳು ನಮ್ಮ ಒಟ್ಟು ಕುಟುಂಬದ ಆಸ್ತಿ ಆಗಿತ್ತು ಎಂದರೆ ಸರಿಯಲ್ಲ.

ದಿಃ23.08.2019 ರಂದು ನಾನು ಹೈವೇ ಪ್ರಾಧಿಕಾರದವರಿಗೆ ಒಂದು ಒಪ್ಪಿಗೆ ಪ್ರಮಾಣ ಪತ್ರವನ್ನು ನಿಪಿ 7 ರಂತೆ ಬರೆದುಕೊಟ್ಟಿರುತ್ತೇನೆ ಎಂದರೆ ಸರಿ. ನಿಪಿ 7 ರಲ್ಲಿ ವಿಶೇಷ ಭೂ-ಸ್ವಾಧೀನಾಧಿಕಾರಿಗಳ ಮುಂದೆ ದಾವಾ ಸ್ವತ್ತು ಹೇಗೆ ನನಗೆ ಬಂದಿದೆ ಎಂದು ಹೇಳಿರುತ್ತೇನೋ ಇಲ್ಲವೋ ನನಗೆ ನೆನಪಿಲ್ಲ. ಸಾಮಾನ್ಯವಾಗಿ ಯಾವುದೇ ಒಬ್ಬ ವ್ಯಕ್ತಿಯ ಹೆಸರಿಗೆ ಸ್ವತ್ತಿನ ಖಾತೆ ಮಾಡಬೇಕಾದರೆ ವಿಲ್, ಕ್ರಯಪತ್ರ, ಹಕ್ಕು ಪತ್ರ, ವಿಭಾಗಪತ್, ದನಾಪತ್ರ ಗಳ ಆಧಾರದ ಮೇಲೆ ಖಾತೆ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

**O.S. No.680/2019. DW-1.**

ನನಗೆ ಎಲ್ಲಾ ವಿಚಾರಗಳು ಗೊತ್ತಿದ್ದರು ಸಹ ವಾದಿಗೆ ವಿಭಾಗ ಕೊಡಬೇಕಾಗುತ್ತದೆ ಎಂಬ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಿಶೇಷ ಭೂ-ಸ್ವಾಧೀನಾಧಿಕಾರಿಗಳು ನನಗೆ ಮತ್ತು ವಾದಿ, ಇತರ ಪ್ರತಿವಾದಿಗಳಿಗೆ ದಾವಾ ಆಸ್ತಿ ಜಪ್ತಿಯಾಗಿರುವ ಬಾಬ್ತು ರೂ.11,22,635/- ಹಣ ಪರಿಹಾರವಾಗಿ ಬರುತ್ತದೆ ಎಂದು ನೋಟೀಸು ನೀಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ನೋಟೀಸ್ ಅನ್ನು ನನಗೆ ಮಾತ್ರ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಭೂ-ಸ್ವಾಧೀನಾಧಿಕಾರಿಗಳು ಸದರಿ ನೋಟೀಸ್ ಅನ್ನು 2017-2018 ರಲ್ಲಿ ಒಂದು ನೊಟೀಸು, 2018-2019 ರಲ್ಲಿ ಪರಿಹಾರದ ಹಣದ ಬಗ್ಗೆ ಇನ್ನೊಂದು ನೋಟೀಸ್ ಅನ್ನು ನೀಡಿರುತ್ತಾರೆ, ಅವುಗಳ ದಿನಾಂಕ ನನಗೆ ನೆನಪಿಲ್ಲ. ಸದರಿ ನೊಟೀಸ್ ನ ಪ್ರತಿ ನನ್ನ ಮನೆಯಲ್ಲಿ ಇರಬಹುದು. ಸದರಿ ನೋಟೀಸುಗಳ ಇನ್ನೊಂದು ಪ್ರತಿಯು ಭೂ-ಸ್ವಾಧೀನಾಧಿಕಾರಿಗಳ ಕಛೇರಿಯಲ್ಲಿ ಇದೆ ಎಂದರೆ ಇರಬಹುದು. ಸದರಿ ನೋಟೀಸುಗಳ ಪ್ರತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ.

ಬಂದಂತಹ ಪರಿಹಾರದ ಹಣವನ್ನು ಭೂ-ಸ್ವಾಧೀನಾಧಿಕಾರಿಗಳಿಗೆ ನಾನು ಸುಳ್ಳು ಮಾಹಿತಿ ನೀಡಿ ಪೂರ್ತಿ ಹಣವನ್ನು ನಾನು ಒಬ್ಬನೇ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಪತ್ನಿಯ ಹೆಸರು ಸುಮಿತ್ರಮ್ಮ. ಸುಮಿತ್ರಮ್ಮ ರವರು ಚಿಕ್ಕಮಗಳೂರಿನಲ್ಲಿನ ಬ್ಯಾಂಕಿನಲ್ಲಿ ಬ್ಯಾಂಕ್ ಖಾತೆ ಹೊಂದಿರುತ್ತಾರೆ ಎಂದರೆ ಇರಬಹುದು, ನನಗೆ ಮಾಹಿತಿ ಇಲ್ಲ. ನನ್ನ ಪತ್ನಿ ಸುಮಿತ್ರಮ್ಮ ರವರು ಚಿಕ್ಕಮಗಳೂರಿನಲ್ಲಿ ಎಷ್ಟು ಬ್ಯಾಂಕಿನಲ್ಲಿ ಖಾತೆ ಹೊಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನಗೆ ಬಂದ ರೂ.11,22,635/- ಪರಿಹಾರದ ಹಣವನ್ನು ನನ್ನ ಪತ್ನಿಯ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಪತ್ನಿ ಸರ್ಕಾರಿ ಶಾಲೆಯಲ್ಲಿ ಶಿಕ್ಷಕಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು.

KACM210035012019

**O.S. No.680/2019. DW-1.**

ಒಂದು ವೇಳೆ ರೂ.11,22,635/- ಹಣ ನನ್ನ ಪತ್ನಿಯ ಬ್ಯಾಂಕ್ ಖಾತೆಯಲ್ಲಿ ಜಮಾ ಆಗಿರುವುದು ಕಂಡು ಬಂದಲ್ಲಿ ಅದರಲ್ಲಿ ವಾದಿಯ ಭಾಗವನ್ನು ಬಿಟ್ಟುಕೊಡುತ್ತಿರೇ ಎಂದರೆ ಸಾಕ್ಷಿಯು ನನ್ನ ಮತ್ತು ನನ್ನ ಪತ್ನಿಯ ವ್ಯವಹಾರ ಬೇರೆ ಬೇರೆ ಆಗಿರುತ್ತದೆ, ಅವರ ಬ್ಯಾಂಕ್ ಖಾತೆಯ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಿ ಮುಂದೂಡಲಾಯಿತು
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

sd/-
ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.